ಅಧ್ಯಕ್ಷರು : ನಾಳೆ ತೆಗೆದುಕೊಳ್ಳೋಣ. ಈಗ ಪ್ರಶ್ನೋತ್ತರ ಕಲಾಪ ಕೈಗೆತ್ತಿಕೊಳ್ಳೋಣ.

ಶ್ರೀ ಸಿದ್ದರಾಮಯ್ಯ : ನಾನು ಈ ವಿಧೇಯಕದ ಮೇಲೆ ಒಂದು ಗಂಟೆ ಕಾಲ ಆರ್ಗ್ಯುಮೆಂಟ್ ಮಾಡುತ್ತೇನೆ. I want to oppose it strongly.

4. ಪ್ರಶ್ನೋತ್ತರ :

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು.

ಅರಸೀಕೆರೆ ಪ್ರಾಥಮಿಕ & ತಾಲ್ಲೂಕು ಕೇಂದ್ರ & ಸಮುದಾಯ ಕೇಂದ್ರಗಳಲ್ಲಿ ಖಾಲಿ ಇರುವ ಆರೋಗ್ಯ ಕೇಂದ್ರಗಳು.

106 (1128) ಶ್ರೀ ಶಿವಲಿಂಗೇಗೌಡ ಕೆ.ಎಂ. (ಅರಸೀಕೆರೆ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅರಸೀಕೆರೆ ಪ್ರಾಥಮಿಕ ಮತ್ತು ತಾಲ್ಲೂಕು ಕೇಂದ್ರ ಮತ್ತು ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಖಾಲಿ ಇರುವ ವೈದ್ಯರ ಸಂಖ್ಯೆ ಎಷ್ಟು (ವಿವರಗಳನ್ನು ನೀಡುವುದು);

ಆ) ಹಾಗಿದ್ದಲ್ಲಿ, ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಬಿ. ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಅರಸೀಕೆರೆ ತಾಲ್ಲೂಕಿನಲ್ಲಿ ಖಾಲಿ ಇರುವ ವೈದ್ಯರ ಹುದ್ದೆಗಳ ವಿವರ ಕೆಳಕಂಡಂತಿವೆ:–

ಕ್ರ. ಸಂ.	ಆರೋಗ್ಯ ಕೇಂದ್ರ/ಆಸ್ಪತ್ರೆ	ಮಂಜೂರು	ಕಾರ್ಯ ನಿರತ	ಖಾಲಿ
1	ಪ್ರಾಥಮಿಕ ಆರೋಗ್ಯ ಕೇಂದ್ರಗಳು	29	16	13
2	ಸಮುದಾಯ ಆರೋಗ್ಯ ಕೇಂದ್ರ	5	3	2
3	ತಾಲ್ಲೂಕು ಆಸ್ಪತ್ರೆ	12	10	2

ಆ) ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವ ಕುರಿತಂತೆ ಸರ್ಕಾರ ಕೈಗೊಂಡಿರುವ ಕ್ರಮಗಳ ವಿವರಗಳನ್ನು ಅನುಬಂಧ–1 ರಲ್ಲಿ ನೀಡಲಾಗಿದೆ.

ಅನುಬಂಧ – 1

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ವಿವಿಧ ವೃಂದಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ತೆಗೆದುಕೊಂಡಿರುವ/ತೆಗೆದುಕೊಳ್ಳಲಿರುವ ಕ್ರಮಗಳ ವಿವರ

1. ತಜ್ಞ ವೈದ್ಯರ ಖಾಲಿ ಹುದ್ದೆಗಳನ್ನು 2010 ರಲ್ಲಿ ಸ್ನಾತಕೋತ್ತರ ವ್ಯಾಸಂಗ ಮುಗಿಸಿ ಬರುವ ವೈದ್ಯರಿಗೆ ಸ್ಥಳನಿಯುಕ್ತಿ ಮಾಡುವ ಮೂಲಕ ಆದ್ಯತಾನುಸಾರ ಭರ್ತಿ ಮಾಡಲು ಕ್ರಮವಹಿಸ ಲಾಗುವುದು.
2. (1) ಮಕ್ಕಳ ತಜ್ಞರು, (2) ಅರವಳಿಕೆ ತಜ್ಞರು ಹಾಗೂ (3) ಸ್ತ್ರೀರೋಗ ತಜ್ಞರುಗಳ ಕೊರತೆಯನ್ನು ನೀಗಿಸಲು ಮಾಸಿಕ ಗರಿಷ್ಠ ರೂ. 50,000 ರವರೆಗೆ ಗೌರವ ಧನ ನೀಡಿ ನೇಮಕ ಮಾಡಿಕೊಳ್ಳಲು ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನದ (ಎನ್.ಆರ್.ಹೆಚ್.ಎಂ.) ಅಡಿ ಅವಕಾಶ ಕಲ್ಪಿಸಲಾಗಿದೆ. ಹಾಗೂ ಇದೇ ಯೋಜನೆಯಡಿ ಪ್ರಕರಣವಾರು ಆಧಾರದ ಮೇಲೆ ಪ್ರತೀ ಪ್ರಕರಣವೊಂದಕ್ಕೆ (1) ಮಕ್ಕಳ ತಜ್ಞರಿಗೆ ರೂ. 500, (2) ಅರವಳಿಕೆ ತಜ್ಞರಿಗೆ ರೂ. 1,000 ಹಾಗೂ (3) ಸ್ತ್ರೀರೋಗ ತಜ್ಞರಿಗೆ ರೂ. 1,500 ರಂತೆ ನೀಡಲು ಸಹ ಅವಕಾಶ ಕಲ್ಪಿಸಲಾಗಿದೆ.
3. ಕರ್ನಾಟಕ ಆರೋಗ್ಯ ಪದ್ಧತಿ ಅಭಿವೃದ್ಧಿ ಸುಧಾರಣಾ ಯೋಜನೆ (ಕೆ.ಹೆಚ್.ಎಸ್.ಡಿ. ಆರ್.ಪಿ)ರ ಅಡಿಯಲ್ಲಿ ಮೇಲಿನ ಕ್ರಮ ಸಂಖ್ಯೆ: 2 ರಲ್ಲಿ ತಿಳಿಸಿರುವ 3 ತಜ್ಞತೆಗಳನ್ನು ಹೊರತುಪಡಿಸಿ ಉಳಿದ ತಜ್ಞತೆಯನ್ನು ಮಾಸಿಕ ರೂ. 5,000 ಗೌರವ ಧನ ನೀಡಿ ರಿಟೈನರ್ ಶಿಪ್ ಆಧಾರದ ಮೇಲೆ ನೇಮಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಇದೇ ಕೆ.ಹೆಚ್.ಎಸ್.ಆರ್.ಡಿ.ಪಿ. ಯೋಜನೆಯಡಿ, ಸದರಿ ತಜ್ಞರು ಹೊರರೋಗಿ ವಿಭಾಗದಲ್ಲಿ ಕಾರ್ಯನಿರ್ವಹಿಸಿದ್ದಲ್ಲಿ ದಿನವೊಂದಕ್ಕೆ ರೂ. 1,000 ದಂತೆ ಗೌರವ ಧನ ನೀಡಲು ಅವಕಾಶ ಕಲ್ಪಿಸಲಾಗಿದೆ.

ಆದರೆ ವಾರಕ್ಕೆ ಎರಡು ದಿನಕ್ಕೆ ಮಾತ್ರ ಅಂತಹ ಸೇವೆಯನ್ನು ಪಡೆಯಲು ಮಿತಿಗೊಳಿಸಲಾಗಿದೆ.

4. ಎಂ.ಬಿ.ಬಿ.ಎಸ್, ವೈದ್ಯರಿಗೆ ಅರವಳಿಕೆ ಹಾಗೂ ಸಿಜೇರಿಯನ್ ಶಸ್ತ್ರಚಿಕಿತ್ಸೆಗಳಿಗೆ ತರಬೇತಿ ನೀಡಲಾಗುತ್ತಿದ್ದು ಈ ಮೂಲಕ ಸ್ತ್ರೀ ರೋಗ ಹಾಗೂ ಅರವಳಿಕೆ ತಜ್ಞರ ಕೊರತೆಯನ್ನು ನೀಗಿಸಲು ಕ್ರಮವಹಿಸಲಾಗಿದೆ.
5. ಕರ್ನಾಟಕ ಲೋಕ ಸೇವಾ ಆಯೋಗದ ಮೂಲಕ 562 ವೈದ್ಯರ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮವಹಿಸಲಾಗಿದೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರ ಒದಗಿಸಿದ್ದಾರೆ. ಆದರೆ, ಇವತ್ತು ಪರಿಸ್ಥಿತಿ ಏನಾಗಿದೆ ಎಂದರೆ, ವೈದ್ಯರುಗಳು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಾಗಲಿ, ತಾಲ್ಲೂಕು ಆರೋಗ್ಯ ಕೇಂದ್ರಗಳಲ್ಲಾಗಲಿ ಪೂರ್ಣ ಪ್ರಮಾಣದಲ್ಲಿಲ್ಲ. ವೈದ್ಯರುಗಳನ್ನು ನೇಮಿಸುತ್ತೇವೆಂದು.....ಒಬ್ಬರು ವೈದ್ಯರು ಮೂರು ವರ್ಷಗಳಿಂದ ಅರಸೀಕೆರೆಯಲ್ಲಿ ನರ್ಸಿಂಗ್ ಹೋಮ್ ಇಟ್ಟುಕೊಂಡಿದ್ದಾರೆ ಅವರು ವಾಲಂಟರಿಗೆ ಅಪ್ಲೈ ಮಾಡಿದ್ದಾರೆ. ಆದರೆ, ಅವರ ವಾಲಂಟರಿಗೆ ಇನ್ನೂ ಪರ್ಮಿಶನ್ ಕೊಟ್ಟಿಲ್ಲ. ಅವರ lean ಅರಸೀಕೆರೆ ಸರ್ಕಾರಿ ಆಸ್ಪತ್ರೆಯಲ್ಲಿಯೇ ಇದೆ. ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಅರಸೀಕೆರೆಗೆ ಭೇಟಿಯಿತ್ತಾಗಲೂ ಹೇಳಿದ್ದೆವು. ಇನ್ನೊಬ್ಬರು ವೈದ್ಯರು ಆರು ತಿಂಗಳ ಕಾಲ ರಜೆ ಹಾಕಿದ್ದರು. ಅವರೂ ವಾಲಂಟರಿಗೆ ಅಪ್ಲೈ ಮಾಡಿದ್ದರು. ಆದರೆ, ಅವರು ಅಲ್ಲಿ ಸರಿಯಾಗಿ ಕೆಲಸ ಮಾಡುತ್ತಿಲ್ಲ. ಅದೇ ರೀತಿ ಅಲ್ಲಿರುವ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಇರುವ 3–4 ವೈದ್ಯರು, ಮಧ್ಯಾಹ್ನ ಒಬ್ಬರು ವೈದ್ಯರಿದ್ದರೆ, ಸಂಜೆ ಮತ್ತೊಬ್ಬ ವೈದ್ಯರು, ಹೀಗೆ ಗಂಟೆಗೊಬ್ಬರಂತೆ ವೈದ್ಯರನ್ನು ಬದಲಾಯಿಸಿಕೊಂಡು, ಹೊಂದಾಣಿಕೆ ಮಾಡಿಕೊಂಡು ಕೆಲಸ ಮಾಡುತ್ತಿದ್ದಾರೆ. ಅಲ್ಲಿನ ಆಸ್ಪತ್ರೆಗಳಿಗೆ ವೈದ್ಯರುಗಳನ್ನು ನೇಮಿಸಬೇಕೆಂದು ಬಹಳ ದೊಡ್ಡ ಕೂಗು ಇದೆ. ಆದುದರಿಂದ, ವೈದ್ಯರನ್ನು ಯಾವಾಗ ನೇಮಿಸುತ್ತೀರಿ? ಸುಮ್ಮನೆ ನಾನು ಪ್ರಶ್ನೆ ಕೇಳುವುದು, ಅದಕ್ಕೆ ಮಾನ್ಯ ಸಚಿವರು ಉತ್ತರ ಹೇಳುವುದಾಗಬಾರದು.

ನನ್ನ ಕ್ಷೇತ್ರದಲ್ಲಿರುವ ಆಸ್ಪತ್ರೆಗಳಲ್ಲಿ ವೈದ್ಯರುಗಳನ್ನು ಇಲ್ಲದಿರುವುದಕ್ಕೆ 'ನಿನ್ನ ಯೋಗ್ಯತೆಗೆ ಎಂಎಲ್ಎ ಆಗಿದ್ದೀಯಾ, ವೈದ್ಯರನ್ನು ನೇಮಿಸುವುದಕ್ಕೆ

ನಿನಗೆ ಯೋಗ್ಯತೆ ಇಲ್ಲದಿದ್ದರೆ, ಎಂಎಲ್‌ಎ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಹೋಗು' ಎಂದು ಜನರು ನಮ್ಮ ಕ್ಷೇತ್ರದಲ್ಲಿ ಹೇಳುತ್ತಾರೆ. ಇವರು 'ಆರೋಗ್ಯ ಸುಧಾರಣೆ ಮಾಡಿದ್ದೇವೆ, ಅದನ್ನು ಸುಧಾರಣೆ ಮಾಡಿದ್ದೇವೆ, ಇದನ್ನು ಸುಧಾರಣೆ ಮಾಡಿದ್ದೇವೆ' ಎಂದು ಹೇಳುತ್ತಾರೆ. ಆದರೆ, ವೈದ್ಯರನ್ನು ನೇಮಿಸಿಲ್ಲ. ವೈದ್ಯರು ಇಲ್ಲವೆಂದರೆ, ಆರೋಗ್ಯ ಕೇಂದ್ರಗಳಾದರೂ ಹೇಗೆ ಕಾರ್ಯ ನಿರ್ವಹಿಸುತ್ತವೆ? ಅಲ್ಲಿಗೆ ಸೌಕರ್ಯಗಳನ್ನು ಕೊಟ್ಟು ಏನು ಪ್ರಯೋಜನ? 104 ಆಯಿತು, 105 ಆಯಿತು, ವಾಜಪೇಯಿ ಶ್ರೀರಕ್ಷೆ ಯೋಜನೆ ಬಂತು. ಎಲ್ಲಾ ಕೊಟ್ಟು ಏನು ಪ್ರಯೋಜನವಾಯಿತು? ಆದುದರಿಂದ, ದಯಮಾಡಿ ವೈದ್ಯರುಗಳನ್ನು ಯಾವಾಗ ನೇಮಿಸುತ್ತೀರಿ? ಎಂಬುದನ್ನು ಮಾನ್ಯ ಸಚಿವರು ಹೇಳಬೇಕು.

ಶ್ರೀ ಬಿ. ಶ್ರೀರಾಮುಲು : ಮಾನ್ಯ ಅಧ್ಯಕ್ಷರೆ, ಅರಸೀಕೆರೆ ತಾಲ್ಲೂಕು ಆಸ್ಪತ್ರೆಗೆ ನಾನು ಭೇಟಿ ಕೊಟ್ಟಿದ್ದೇನೆ. ಭೇಟಿ ಕೊಟ್ಟ ಸಂದರ್ಭದಲ್ಲಿ ಅಲ್ಲಿನ ಶಾಸಕರು ನನ್ನ ಜೊತೆಯಲ್ಲಿದ್ದರು. ಆ ಸಂದರ್ಭದಲ್ಲಿ ಒಂದು ಗಂಟೆ ಕಾಲ ಸುದೀರ್ಘವಾಗಿ ನಾವು ಮತ್ತು ಮಾನ್ಯ ಶಾಸಕರು ಚರ್ಚಿಸಿದ್ದೇವೆ. ಆಗ ನನ್ನ ಗಮನಕ್ಕೆ ಅವರು ವಿಷಯ ತೆಗೆದುಕೊಂಡು ಬಂದಿದ್ದರು. ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ 29 ಹುದ್ದೆಗಳು ಮಂಜೂರಾಗಿದ್ದು, 16 ವೈದ್ಯರುಗಳು ಕಾರ್ಯ ನಿರ್ವಹಿಸುತ್ತಿದ್ದು, 13 ಹುದ್ದೆಗಳು ಖಾಲಿ ಇರುತ್ತವೆ. ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ 5 ಹುದ್ದೆಗಳು ಮಂಜೂರಾಗಿದ್ದು, 3 ವೈದ್ಯರುಗಳು ಕಾರ್ಯ ನಿರ್ವಹಿಸುತ್ತಿದ್ದು, 2 ಹುದ್ದೆಗಳು ಖಾಲಿ ಇವೆ. ಅದೇ ರೀತಿ ತಾಲ್ಲೂಕು ಆಸ್ಪತ್ರೆಗಳಲ್ಲಿ 12 ವೈದ್ಯ ಹುದ್ದೆಗಳು ಮಂಜೂರಾಗಿದ್ದು, 10 ವೈದ್ಯರು ಕಾರ್ಯ ನಿರ್ವಹಿಸುತ್ತಿದ್ದು, 2 ಹುದ್ದೆಗಳು ಖಾಲಿ ಇರುವ ವಿಷಯವನ್ನು ನನ್ನ ಗಮನಕ್ಕೆ ತಂದಿದ್ದರು. ಆಸ್ಪತ್ರೆಗಳಲ್ಲಿ ಔಷಧಿಗಳು ಹಾಗೂ ಬೇರೆ ವಿಷಯಗಳಿಗೆ ಸಂಬಂಧಿಸಿದಂತೆ ನಾವು set right ಮಾಡುವಾಗ ಪತ್ರಿಕಾಗೋಷ್ಠಿ ಕರೆದು ಹೇಳಿದ್ದೆ. ಇವತ್ತು ಪ್ರಥಮ ಬಾರಿಗೆ ಮೊನ್ನೆ 8 ರಿಂದ 15 ವೈದ್ಯರುಗಳನ್ನು ನೇಮಿಸಿಕೊಂಡ ಬಳಿಕ ಪುನಃ 562 ವೈದ್ಯರುಗಳನ್ನು ನೇಮಿಸಿಕೊಂಡಿದ್ದೇವೆ. ಇನ್ನೂ 15–20 ದಿವಸಗಳಾಗಬಹುದು. ಅವರು ಬಂದ ತಕ್ಷಣ ನಿಮ್ಮ ತಾಲ್ಲೂಕುಗಳಲ್ಲಿರುವ ಆಸ್ಪತ್ರೆಗಳಿಗೆ ಆದ್ಯತೆ ಕೊಟ್ಟು ವೈದ್ಯರುಗಳನ್ನು ನೇಮಿಸುತ್ತೇನೆಂದು ಅವತ್ತು ಹೇಳಿದ್ದೇನೆ, ಇವತ್ತಿಗೂ ಅದೇ ಮಾತನ್ನು ಹೇಳುತ್ತಿದ್ದೇನೆ. ಆದಷ್ಟು ಬೇಗ ಅರಸೀಕೆರೆ ತಾಲ್ಲೂಕಿನಲ್ಲಿರುವ ಆಸ್ಪತ್ರೆಗಳಿಗೆ ಎಷ್ಟು ಸಂಖ್ಯೆಯಲ್ಲಿ ವೈದ್ಯರು ಮತ್ತು ದಾದಿಯರು ಬೇಕೋ,

ಅದರ ವ್ಯವಸ್ಥೆ ಮಾಡಿಕೊಡುತ್ತೇನೆಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ.

ಶ್ರೀ ಕೆ.ಎಂ. ಶೀವಲಿಂಗೇಗೌಡ : ಮಾನ್ಯ ಸಚಿವರು ಹೇಳಿದ್ದಾರೆ, ಸಂತೋಷ. ವೈದ್ಯರುಗಳನ್ನು ನೇಮಿಸಲು ಒಂದು ತಿಂಗಳ ಸಮಯಾವಕಾಶ ತೆಗೆದುಕೊಂಡಿದ್ದಾರೆ. ಅವರು ವೈದ್ಯರುಗಳನ್ನು ನೇಮಿಸಿದಲ್ಲಿ, ಅವರಿಗೆ ಧನ್ಯವಾದಗಳನ್ನರ್ಪಿಸುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ : ಅಧ್ಯಕ್ಷರೆ, ಇಂತಹುದೇ ಪ್ರಶ್ನೆಯನ್ನು ನಾನು ಕಳೆದ ವರ್ಷ ಕೇಳಿದ್ದೆ. ಆದರೆ, ಇನ್ನೂ ಆಗಿಲ್ಲ.

ಅಧ್ಯಕ್ಷರು : ಮಾನ್ಯ ಸಚಿವರು ಸ್ಪಷ್ಟವಾಗಿ ಹೇಳಿದ್ದಾರೆ.

ಪ್ರಶ್ನೆ ಸಂಖ್ಯೆ : 109 (1470)

ಅಧ್ಯಕ್ಷರು : ಮಾನ್ಯ ತನ್ವೀರ್ ಸೇಠ್‌ರವರೆ, ನಿಮ್ಮ ಪ್ರಶ್ನೆಗೆ ಮಾನ್ಯ ಕಾರ್ಮಿಕ ಸಚಿವರು ಸಮಯ ಕೇಳಿದ್ದಾರೆ.

ಶ್ರೀ ತನ್ವೀರ್ ಸೇಠ್ : ಮಾನ್ಯ ಅಧ್ಯಕ್ಷರೆ, ಕೇಂದ್ರ ಸರ್ಕಾರದ ಯೋಜನೆಯಡಿ ಅನುಷ್ಠಾನಗೊಳಿಸುತ್ತಿರುವ ಕಾರ್ಯಕ್ರಮ ಇದಾಗಿದೆ. ಸುಮಾರು 32 ಐಟಿಐಗಳಲ್ಲಿ ಕಳೆದ ಮೂರು ವರ್ಷಗಳಲ್ಲಿ ಎಷ್ಟು ಹಣ ಖರ್ಚು ಮಾಡಲಾಗಿದೆ ಎಂಬ ಪ್ರಶ್ನೆ ಕೇಳಿದ್ದೇನೆ.

ಅಧ್ಯಕ್ಷರು : ಈ ಕುರಿತಾದ ಉತ್ತರ ಇಲ್ಲದೆ ಹೇಗೆ ಪ್ರಶ್ನೆ ಕೇಳುತ್ತೀರಿ?

ಶ್ರೀ ತನ್ವೀರ್ ಸೇಠ್ : ನನ್ನ ಹತ್ತಿರ ಮಾಹಿತಿ ಇದೆ. ಮಾನ್ಯ ಮಂತ್ರಿಗಳ ಹತ್ತಿರವೂ.....

ಅಧ್ಯಕ್ಷರು : ಉತ್ತರ ಬರಬೇಕಲ್ಲ.

(ಶ್ರೀ ಚಂದ್ರಕಾಂತ್ ಗುರಪ್ಪ ಬೆಲ್ಲದ್‌ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಶ್ರೀ ಬಿ.ಎನ್. ಬಚ್ಚೇಗೌಡ : ಮಾನ್ಯ ಛೇರ್ಮನ್‌ರವರೆ, ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗಳಿಗೆ ಸಂಬಂಧಿಸಿದಂತೆ ಬಹಳಷ್ಟು ಮಾಹಿತಿಗಳು ಬೇಕಾಗುತ್ತದೆ. ಸಾಕಷ್ಟು ಮಾಹಿತಿಗಳನ್ನು ತಾವೂ (ತನ್ವೀರ್ ಸೇಠ್) ಕೇಳಿದ್ದೀರಿ. 2005–06 ರಿಂದ ಪ್ರಾರಂಭಗೊಂಡಿರುವ ಎಲ್ಲಾ 36 COE institutions ಏನಿವೆ, ಇವುಗಳಿಗೆ ನಾವು ಎಷ್ಟು ಹಣ ಕೊಟ್ಟಿದ್ದೇವೆ,